ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಗಂಗಾ ಕಲ್ಯಾಣ ಯೋಜನೆಯಡಿ ಸಾಮೂಹಿಕ ಕೊಳವೆಬಾವಿ ಘಟಕ ವೆಚ್ಚ ಪರಿಷ್ಕರಣೆ ಬಗ್ಗೆ.

ಓದಲಾಗಿದೆ: (1) ಸರ್ಕಾರಿ ಆದೇಶ ಸಂಖ್ಯೆ ಸಕಇ 82 ಎಸ್‌ಡಿಸಿ 95, ದಿನಾಂಕ 15-05-1996
(2) ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಇವರ ಪತ್ರ ಸಂಖ್ಯೆ: ಡಾ. ಬಿ.ಆರ್.ಅಂಅನಿ/ಗಂಕಯೋ/ಸಾಮೂ/2012-13/21549, ದಿನಾಂಕ: 02-03-2013.

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರಿ ಆದೇಶದ ಕಂಡಿಕೆ .6 ರಲ್ಲಿ 8 ಎಕರೆ ಜಮೀನಿಗೆ ₹ 2.53 ಲಕ್ಷ ಹಾಗೂ 15 ಎಕರೆಯ ಜಮೀನಿಗೆ ₹ 3.59 ಲಕ್ಷಗಳಂತೆ ಘಟಕ ವೆಚ್ಚ ನಿಗಧಿಪಡಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2) ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು ಇವರು ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತಿಸಣ್ಣ ರೈತರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದ್ದು, ವೈಯಕ್ತಿಕ ಕೊಳವೆ ಬಾವಿ ಯೋಜನೆಯಡಿ ಮಾತ್ರ ಘಟಕ ವೆಚ್ಚ ಪರಿಷ್ಕರಣೆಯಾಗಿದ್ದು, ಸಾಮೂಹಿಕ ಯೋಜನೆಯಡಿಯ ಘಟಕ ವೆಚ್ಚವು ಪೂರ್ಣ ಸಹಾಯಧನವಾಗಿದ್ದು, ಈ ಘಟಕ ವೆಚ್ಚವನ್ನು 16 ವರ್ಷಗಳಾದರೂ ಪರಿಷ್ಕರಿಸದಿರುವುದರಿಂದ ನಿಗಧಿಪಡಿಸಿದ ಘಟಕವೆಚ್ಚದಲ್ಲಿ ಘಟಕವನ್ನು ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. 1996 ರಿಂದ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳ ದರಗಳು, ಪೈಪಗಳ ದರಗಳು ಈಗಿರುವ ದರವು ತುಲನಾತ್ಮಕ ಹೆಚ್ಚಾಗಿರುತ್ತದೆ. ಕೇಸಿಂಗ್ ಪೈಪ್‌ಗಳ ದರಗಳು ಹೆಚ್ಚಾಗಿರುವುದರಿಂದ ಡೀಸೆಲ್ ದರವು ಹೆಚ್ಚಾಗಿರುತ್ತದೆ. ಈ ದರಗಳಲ್ಲಿ ಘಟಕಗಳನ್ನು ಪೂರ್ಣಗೊಳಿಸಲು ಫಲಾನುಭವಿ ವಂತಿಗೆ ಒದಗಿಸಬೇಕಾಗುತ್ತದೆ. ಪ್ರಯುಕ್ತ ಈ ಕುರಿತು ನಿಗಧಿಯಾದ ಮೊತ್ತ ಹಾಗೂ ಹೆಚ್ಚುವರಿ ಮಾಡಬೇಕಾದ ಮೊತ್ತದ ತುಲನಾತ್ಮಕ ವರದಿಯನ್ವಯ 2 ಕೊಳವೆಬಾವಿಗಳ ಕನಿಷ್ಠ 8 ಎಕರೆಯ ಘಟಕಕ್ಕೆ ₹ 5.25 ಲಕ್ಷ ಮತ್ತು 3 ಕೊಳವೆಬಾವಿಗಳ ಕನಿಷ್ಠ 15 ಎಕರೆಯ ಘಟಕಕ್ಕೆ ₹ 8.07 ಲಕ್ಷಗಳಂತೆ ಹೆಚ್ಚಿಸಿ ಘಟಕ ವೆಚ್ಚವನ್ನು ನಿಗಧಿಪಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಕೆಳಗಿನಂತೆ ಆದೇಶಿಸಲಾಗಿದೆ.

**ಆದೇಶ ಸಂಖ್ಯೆ: ಸಕಇ 112 ಎಸ್‌ಡಿಸಿ 2012, ಬೆಂಗಳೂರು,**
**ದಿನಾಂಕ:17/06/2013.**

ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಸಾಮೂಹಿಕ ಕೊಳವೆಬಾವಿ ಕಾರ್ಯಕ್ರಮದ ಘಟಕ ವೆಚ್ಚವನ್ನು ಈ ಕೆಳಕಂಡಂತೆ ಪರಿಷ್ಕರಿಸಿ ಆದೇಶಿಸಲಾಗಿದೆ.

ಎ) 2 ಕೊಳವೆಬಾವಿಗಳ 8 ಎಕರೆಯವರೆಗಿನ ಘಟಕಕ್ಕೆ ₹. 2.53 ಲಕ್ಷದಿಂದ ₹. 4.00 ಲಕ್ಷಗಳಿಗೆ ಹೆಚ್ಚಿಸಿದೆ.

ಬಿ) 3 ಕೊಳವೆಬಾವಿಗಳ 15 ಎಕರೆಯವರೆಗಿನ ಘಟಕಕ್ಕೆ ₹. 3.59 ಲಕ್ಷದಿಂದ ₹, 6.00ಲಕ್ಷಗಳಿಗೆ. ಹೆಚ್ಚಿಸಿದೆ.

ಈ ಪರಿಷ್ಕರಣೆಯಿಂದ ಉಂಟಾಗಲಿರುವ ವೆಚ್ಚವನ್ನು ನಿಗಮದ ಲಭ್ಯ ಸಂಪನ್ಮೂಲಗಳ ಮಿತಿಯಲ್ಲಿಯೇ ಭರಿಸಿ ಯೋಜನೆಯನ್ನು ಅನುಷ್ಠಾನಗೊಳಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 350 ವೆಚ್ಚ-3/ 2013, ದಿನಾಂಕ:21-05-2013 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ವಿ.ರತ್ನಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ:ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು-ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಿದ 200 ಪ್ರತಿಗಳನ್ನು ಅಧೀನಕಾರ್ಯದರ್ಶಿ-3, ಇವರಿಗೆ ಒದಗಿಸಲು ಕೋರಿದೆ.

ಪ್ರತಿ:-

1. ಮಹಾಲೇಖಪಾಲರು, (ಎ ಮತ್ತು ಇ, ಲೆಕ್ಕಪರಿಶೋಧನೆ-1 ಮತ್ತು 2), ಕರ್ನಾಟಕ ಬೆಂಗಳೂರು.
2. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು
3. ನಿರ್ದೇಶಕರು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
5. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
6. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳಿಗೆ.
7. ಖಜನಾಧಿಕಾರಿಗಳು, ರಾಜ್ಯ ಹುಜೂರ ಖಜಾನೆ,ಬೆಂಗಳೂರು.
8. ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಕೇಂದ್ರ, 2ನೇ ಮಹಡಿ, ಸೌತ್ ಬ್ಲಾಕ್, ಖನಿಜ ಭವನ, ದೇವರಾಜ ಅರಸು ರಸ್ತೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-3 ಮತ್ತು 9) ಆರ್ಥಿಕ ಇಲಾಖೆ, ವಿಧಾನ ಸೌಧ,
10. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ,
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ,
12. ಸರ್ಕಾರದ ಉಪ ಕಾರ್ಯದರ್ಶಿ-1&2, ಸಮಾಜ ಕಲ್ಯಾಣ ಇಲಾಖೆ,ವಿಕಾಸ ಸೌಧ.
13. ಸರ್ಕಾದ ಅಧೀನಕಾರ್ಯದರ್ಶಿ-1 , ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.